# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

("ವಿ ಟಿ ಯು ಅಧಿನಿಯಮ ೧೯೯೪" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ-೫೯೦೦೧೮, ಕರ್ನಾಟಕ, ಭಾರತ

# Visvesvaraya Technological University

(State University of Government of Karnataka Established as per the VTU Act, 1994)
"Jnana Sangama" Belagavi-590018, Karnataka
Phone: (0831) 2498100, Fax: (0831) 2405467, Website: vtu.ac.in
ರಾಷ್ಟ್ರೀಯ ಸೇವಾ ಯೋಜನೆ

ಪ್ರೊ. ಎ.ಎಸ್.ದೇಶಪಾಂಡೆ ಬಿ.ಇ., ಎಂ.ಟೆಕ್., ಪಿಹೆಚ್.ಡಿ. ದೂರವಾಣಿ ಸಂ : (0831) 2405468
ಕುಲಸಚಿವರು ಫ್ಯಾಕ್ಸ್ ಸಂ : (0831) 2405467


ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ರಾಷ್ಟ್ರ-ರಾಜ್ಯ ಪ್ರಶಸ್ತಿ/44/2021-22/436 ದಿನಾಂಕ: 22 JUN 2021

***:ಸುತ್ತೋಲೆ:***

***ವಿಷಯ:*** **2020-21ರ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿಯ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು.**

***ಉಲ್ಲೇಖ:*** ಯುಸೇಇ/ರಾಸೇಯೋ/57/2021-22/52 ದಿನಾಂಕ:16.06.2021

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, **2020-21ರ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಪ್ರಶಸ್ತಿಗಾ**ಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ರಾಷ್ಟ್ರ/ರಾಜ್ಯ ಪ್ರಶಸ್ತಿಗಳಿಗೆ ಪ್ರಸ್ತಾವನೆಯನ್ನು ಆಹ್ವಾನಿಸಿದೆ. ಅದರಂತೆ, ವಿ.ತಾ.ವಿ.ಯ ಅಧಿನಕ್ಕೊಳಪಡುವ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳಿಂದ ರಾಷ್ಟ್ರೀಯ ಸೇವಾ ಯೋಜನೆಯ **2020-21ರ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ಪ್ರಶಸ್ತಿಗಳಾದ**"(1)ಅತ್ಯುತ್ತಮ ಘಟಕ, (2) ಅತ್ಯುತ್ತಮ ಕಾರ್ಯಕ್ರಮಾಧಿಕಾರಿ ಮತ್ತು (3) ಅತ್ಯುತ್ತಮ ಸ್ವಯಂ ಸೇವಕ/ಸೇವಕಿ ಇವರ ಆಯ್ಕೆಗಾಗಿ ಪ್ರಸ್ತಾವನೆಗಳನ್ನು **ಕಡ್ಡಾಯವಾಗಿ ಆಂಗ್ಲ ಭಾಷೆಯಲ್ಲಿ ಮಾತ್ರ 100 ಪುಟಗಳಿಗೆ ಮೀರದಂತೆ** ಪ್ರತ್ಯೇಕವಾಗಿ ಸ್ಪೈರಲ್ ಬೈಂಡಿಂಗ್ ಮಾಡಿಸಿ **ದಿನಾಂಕ:08.7.2021ರೊಳಗೆ** ಸಲ್ಲಿಸಲು ಕೋರಲಾಗಿದೆ. ಸದರಿ ರಾ.ಸೇ.ಯೋ ಪ್ರಶಸ್ತಿ ಪ್ರಸ್ತಾವನೆಗಳಿಗೆ ಸಂಬಂಧಪಟ್ಟ ಮಹಾವಿದ್ಯಾಲಯದ ಪ್ರಾಂಶುಪಾಲರು ಮತ್ತು ಕಾರ್ಯಕ್ರಮಾಧಿಕಾರಿಗಳ ಸಹಿಯೊಂದಿಗೆ ಸಲ್ಲಿಸಲು ಸೂಚಿಸಲಾಗಿದೆ.

***ರಾಷ್ಟ್ರೀಯ ಸೇವಾ ಯೋಜನೆಯ ರಾಷ್ಟ್ರ ಪ್ರಶಸ್ತಿ ಹಾಗೂ ರಾಜ್ಯ ಪ್ರಶಸ್ತಿಯ ಪ್ರಸ್ತಾವನೆಗಳನ್ನು ಆಯ್ಕೆ ಮಾಡುವಾಗ ಈ ಕೆಳಗಿನ ಮಾಹಿತಿಗಳನ್ನು ಎಲ್ಲಾ ಕಾರ್ಯಕ್ರಮಾಧಿಕಾರಿಗಳು ತಪ್ಪದೇ ಗಮನಿಸಲು ಕೋರಲಾಗಿದೆ.***

1. ಕಾರ್ಯಕ್ರಮಾಧಿಕಾರಿಗಳು ಮಹಾವಿದ್ಯಾಲಯ ಮಟ್ಟದಲ್ಲಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿ ಒಬ್ಬರು ಕಾರ್ಯಕ್ರಮಾಧಿಕಾರಿ, ಇಬ್ಬರು ಸ್ವಯಂ ಸೇವಕರ (1 ಸ್ವಯಂ ಸೇವಕ ಮತ್ತು 1 ಸ್ವಯಂ ಸೇವಕಿ) ಪ್ರಸ್ತಾವನೆಗಳನ್ನು ಪರಿಶೀಲಿಸಿ ಆಯ್ಕೆ ಮಾಡಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗೆ ವಿಶ್ವವಿದ್ಯಾಲಯಕ್ಕೆ ಕಳುಹಿಸಬೇಕು.
2. ಪ್ರಥಮ ಹಾಗೂ ದ್ವಿತೀಯ ವರ್ಷ ಪೂರೈಸಿ ಈಗ ತೃತೀಯ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸ್ವಯಂಸೇವಕ/ಸೇವಕಿಯರು ಮಾತ್ರ ಅರ್ಜಿ ಸಲ್ಲಿಸಬಹುದು
3. ಪದವಿಪೂರ್ವ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಎನ್.ಎಸ್.ಎಸ್. 2 ವರ್ಷ ಪೂರೈಸಿರುವ ಸ್ವಯಂಸೇವಕ/ಸೇವಕಿಯರು ಅರ್ಜಿ ಸಲ್ಲಿಸಬಹುದು.
4. ನಿಗದಿತ ದಿನಾಂಕದೊಳಗೆ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ಈ ಕಛೇರಿಗೆ ಕಳುಹಿಸಲು ಕೋರಲಾಗಿದೆ. ಸೂಚಿತ ದಿನಾಂಕ ನಂತರ ಬರುವ ಪ್ರಸ್ತಾವನೆಗಳನ್ನು ತಿರಸ್ಕರಿಸಲಾಗುವುದು.

***"ರಾಜ್ಯ ಪ್ರಶಸ್ತಿ"ಗಳಾದ ಅತ್ಯುತ್ತಮ ಘಟಕ, ಅತ್ಯುತ್ತಮ ಕಾರ್ಯಕ್ರಮಾಧಿಕಾರಿ, ಮತ್ತು ಅತ್ಯುತ್ತಮ ಸ್ವಯಂ ಸೇವಕ/ಸೇವಕಿಯರ ಆಯ್ಕೆಗಾಗಿ ದಿನಾಂಕ 08.07.2021ರೊಳಗೆ ಈ ಕೆಳಗಿನ ನಿಭಂಧನೆಗಳಿಗೆ ಒಳಪಟ್ಟು ಪ್ರಸ್ತಾವನೆಗಳನ್ನು ಕಳುಹಿಸಿಕೊಡಲು ಸೂಚಿಸಿದೆ.***

1. ರಾಷ್ಟ್ರ ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿಗಳಿಗೆ ಒಂದೇ ರೀತಿಯ ಪ್ರಸ್ತಾವನೆಗಳಾದರೂ ಪ್ರತ್ಯೇಕ ಪ್ರಸ್ತಾವನೆಗಳನ್ನು ಸಲ್ಲಿಸಿ, ಪ್ರಸ್ತಾವನೆ ಯಾವ ಪ್ರಶಸ್ತಿಗೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.
2. ರಾಜ್ಯಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿಗಳಿಗೆ ಕೇಂದ್ರ ಸರ್ಕಾರದ "ಎನ್.ಎಸ್.ಎಸ್. ರಾಷ್ಟ್ರಪ್ರಶಸ್ತಿ"ಯ ಮಾನದಂಡಗಳನ್ನು ಬಳಸಲಾಗುವುದು.
3. ಪದವಿ ಕಾಲೇಜುಗಳ ಸ್ವಯಂ ಸೇವಕ/ಸೇವಕಿಯರ ಪ್ರಸ್ತಾವನೆ ಕಳುಹಿಸುವಾಗ ಎನ್.ಎಸ್.ಎಸ್ ನಲ್ಲಿ 2 ವರ್ಷ ಪೂರೈಸಿರುವ ಈಗ ತೃತೀಯ ಪದವಿಯಲ್ಲಿರುವ ಸ್ವಯಂಸೇವಕರ ಪ್ರಸ್ತಾವನೆಯನ್ನು ಮಾತ್ರ ಕಳುಹಿಸಬೇಕು.
4. ಯಾವುದೇ ಕಾರಣಕ್ಕೂ ಪದವಿ ಕಾಲೇಜಿನಲ್ಲಿ ಪದವಿ ಪೂರೈಸಿರುವ ಸ್ವಯಂ ಸೇವಕ/ಸೇವಕಿಯರ ಪ್ರಸ್ತಾವನೆ ಕಳುಹಿಸಬಾರದು.

6. ಅತ್ಯುತ್ತಮ ಘಟಕ ಪ್ರಶಸ್ತಿಗಳಿಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂದರ್ಶನವನ್ನು ನಡೆಸಲಾಗುವುದು ಹಾಗೂ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಕಾರ್ಯಯೋಜನೆಯ ಬಗ್ಗೆ ಪರಿಶೀಲಿಸಲಾಗುವುದು.
7. ರಾಜ್ಯ ಪ್ರಶಸ್ತಿಗೆ ಸಂಬಂದಿಸಿದ ಮಾರ್ಗದರ್ಶಿ (guidelines) ಸೂತ್ರಗಳನ್ನು ವಿ.ತಾ.ವಿ.ಯ ವೆಬ್‌ಸೈಟ್ ಹಾಗೂ ಭಾರತ ಸರ್ಕಾರದ ರಾಷ್ಟ್ರೀಯ ಸೇವಾ ಯೋಜನೆಯ ವೆಬ್‌ಸೈಟ್‌ನಿಂದಲೂ ಪಡೆಯಬಹುದಾಗಿದೆ.
8. ಸ್ವಯಂ ಸೇವಕ/ಸೇವಕಿಯರು ಪ್ರಸ್ತಾವನೆಯೊಂದಿಗೆ ತಮ್ಮ 2 ಭಾವಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
9. ಕಾರ್ಯಕ್ರಮಾಧಿಕಾರಿಗಳು ತಮ್ಮ 02 ಭಾವಚಿತ್ರ ಹಾಗೂ ಕಾಲೇಜಿನ ಪ್ರಾಂಶುಪಾಲರ 02 ಭಾವಚಿತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
10. ಪ್ರಸ್ತಾವನೆಯೊಂದಿಗೆ ಮಾರ್ಗದರ್ಶಿ ಸೂತ್ರದಲ್ಲಿರುವ ನಿಗದಿತ ನಮೂನೆಯಲ್ಲಿ ಚೆಕ್‌ಲಿಸ್ಟನ್ನು ಕಡ್ಡಾಯವಾಗಿ ಕಳುಹಿಸಬೇಕು.
11. ಅಭ್ಯರ್ಥಿಗಳು ಕಡ್ಡಾಯವಾಗಿ ನಮೂನೆಯಲ್ಲಿ ತಮ್ಮ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ ಹಾಗೂ ಪ್ರಾಂಶುಪಾಲರ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ನಮೂದಿಸತಕ್ಕದು.

ಪ್ರಸ್ತಾವನೆಗಳನ್ನು ಕಳುಹಿಸುವಾಗ ಮೇಲಿನ ನಿಬಂಧನೆಗಳನ್ನು ಅನುಸರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಪ್ರಸ್ತಾವನೆಗಳನ್ನು ಕಳುಹಿಸಬೇಕು. ಈ ಬಗ್ಗೆ ಯಾವುದೇ ಮಾಹಿತಿ ಅಗತ್ಯವಿದ್ದಲ್ಲಿ ವಿ.ತಾ.ವಿ.ಯ ಎನ್.ಎಸ್.ಎಸ್. ಕೋಶವನ್ನು (ದೂರವಾಣಿ ಸಂಖ್ಯೆ: **0831-2498171**) ಸಂಪರ್ಕಿಸಬಹುದಾಗಿದೆ. ಪ್ರಾಂಶುಪಾಲರು ಹೆಚ್ಚಿನ ಮುತುವರ್ಜಿ ವಹಿಸಿ ತಮ್ಮ ಮಹಾವಿದ್ಯಾಲಯದ ರಾ.ಸೇ.ಯೋ. ಘಟಕದ ಕಾರ್ಯಕ್ರಮಮಾಧಿಕಾರಿ/ಯೋಜನಾಧಿಕಾರಿಗಳನ್ನು ಮತ್ತು ಸ್ವಯಂ ಸೇವಕ/ಸೇವಕಿಯರಿಗೆ ಸದರಿ ಪ್ರಶಸ್ತಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಪ್ರೋತ್ಸಾಹಿಸಿ ಮತ್ತು ಸಹಕರಿಸಲು ಕೋರಲಾಗಿದೆ.

ಪ್ರಶಸ್ತಿಗೆ ಭಾರತ ಸರ್ಕಾರ ನಿಗಧಿಪಡಿಸಿ ಮಾನದಂಡ ಹಾಗೂ ಪ್ರಪತ್ರಗಳ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ ಮತ್ತು ಪ್ರಸ್ತಾವನೆಯೊಂದಿಗೆ ಮಾರ್ಗದರ್ಶಿ ಸೂತ್ರದಲ್ಲಿರುವ ನಿಗದಿತ ನಮೂನೆಗಳಲ್ಲಿನ ಮಾಹಿತಿಯನ್ನು ಭರ್ತಿ ಮಾಡಿ ದಿನಾಂಕ:*08.07.2021*ರೊಳಗಾಗಿ ವಿ.ತಾ.ವಿ.ಯ ರಾ.ಸೇ. ಯೋ. ಕೋಶ, ಬೆಳಗಾವಿಗೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ವಂದನೆಗಳೊಂದಿಗೆ,

21.6.21

ಕುಲಸಚಿವರು

***ಇವರಿಗೆ,***

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು
ವಿ.ತಾ.ವಿ. ಅಧಿನಕ್ಕೊಳಪಡುವ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ
ಮಹಾವಿದ್ಯಾಲಯಗಳು.

***ಪ್ರತಿಗಳು:***

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ ಕಛೇರಿ, ಬೆಂಗಳೂರು.
4. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.